

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04-09-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

اَلَّذِيْنَ اسْتَجَابُوْا لِلّٰهِ وَالرَّسُوْلِ مِنْۢ بَعْدِ مَاۤ اَصَابَهُمُ الْقَرْحُ لِلَّذِيْنَ اَحْسَنُوْا مِنْهُمْ وَاتَّقَوْا اَجْرٌ عَظِيْمٌ

'ತಮಗೆ ಘಾಸಿಯಾದ ನಂತರ (ಕೂಡ) ಅಲ್ಲಾಹನ ಮತ್ತು ಸಂದೇಶವಾಹಕನ ಕರೆಗೆ ಓಗೊಟ್ಟವರ ಪೈಕಿ ಸತ್ಕರ್ಮ ಮಾಡಿದವರಿಗೂ ದೇವಭಕ್ತರಿಗೂ ಮಹತ್ತಾದ ಪ್ರತಿಫಲವಿದೆ.' (ಪವಿತ್ರ ಖುರ್‌ಆನ್ 3:173).

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಸ್ವಲ್ಪ ಹೇಳಲು ಬಾಕಿಯಿತ್ತು. ಇಂದು ಅದನ್ನು ಹೇಳುವೆನು. ನಾನೀಗ ಓದಿದ ಆಯತನ್ನು ಪ್ರಸ್ತಾಪಿಸುತ್ತಾ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ತಮ್ಮ ಸಹೋದರಿ ಪುತ್ರನಾದ ಉರ್‌ವಾರೊಡನೆ ಹೇಳಿದರು: 'ಹೇ ನನ್ನ ಸಹೋದರಿ ಪುತ್ರಾ, ನಿನ್ನ ಪೂರ್ವಜರಾದ ಝುಬೇರ್(ರ) ಮತ್ತು ಅಬೂಬಕ್ಕರ್(ರ) ಈ ಆಯತಿನಲ್ಲಿ ಹೇಳಲಾದ ಸಹಾಬಿಯರಲ್ಲಿ ಒಳಪಟ್ಟಿದ್ದರು. ಉಹದ್ ಯುದ್ಧದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗಾಯಗೊಂಡ ನಂತರ, ಮುಶ್ರಿಕರು ಯುದ್ಧ ಮೈದಾನದಿಂದ ಮರಳಿಹೋದರು. ಆದರೆ ಅವರು ಪುನಃ ಮರಳಿ ಬಂದು ಆಕ್ರಮಣ ನಡೆಸುವ ಸಾಧ್ಯತೆಯಿದೆ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನಿಸುತ್ತಿತ್ತು. ಆದ್ದರಿಂದ 'ಅವರನ್ನು ಹಿಂಬಾಲಿಸಲು ಯಾರೆಲ್ಲ ತಯಾರಿದ್ದಾರೆ' ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು. ತಕ್ಷಣವೇ ಎಪ್ಪತ್ತು ಸಹಾಬಿವರ್ಯರು ಇದಕ್ಕಾಗಿ ತಯಾರಾದರು. ಅಬೂಬಕ್ಕರ್(ರ) ಮತ್ತು ಝುಬೇರ್(ರ) ಇವರಲ್ಲಿ ಒಳಪಟ್ಟಿದ್ದರು. ಇವರಿಬ್ಬರೂ ಗಾಯಗೊಂಡವರಲ್ಲಿ ಸೇರಿದ್ದರು.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾಗಿ ನಾನು ಸ್ವತಃ ಕೇಳಿದ್ದೇನೆ: 'ತಲ್‌ಹಾ ಮತ್ತು ಝುಬೇರ್ ಸ್ವರ್ಗದಲ್ಲಿ ನನ್ನ ಅಕ್ಕಪಕ್ಕದಲ್ಲಿರುವರು.' ಹಝ್ರತ್ ಸಈದ್ ಬಿನ್ ಜುಬೇರ್ ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ತಲ್‌ಹ, ಹಝ್ರತ್ ಝುಬೇರ್, ಹಝ್ರತ್ ಸಅದ್, ಹಝ್ರತ್ ಅಬ್ದುರ್ರಹ್ಮಾನ್ ಮತ್ತು ಹಝ್ರತ್ ಸಈದ್ ಬಿನ್ ಝೈದ್ ಇವರ ಸ್ಥಾನ ಹೇಗಿತ್ತೆಂದರೆ, ಅವರೆಲ್ಲರೂ ಯುದ್ಧ ಮೈದಾನದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಮುಂದೆ ಹೋರಾಡುತ್ತಿದ್ದರು ಮತ್ತು ನಮಾಝಿನಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಿಂದೆ ಇರುತ್ತಿದ್ದರು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾಗುವಾಗ, ಅವುಗಳನ್ನು ಬರೆಯುತ್ತಿರುವವರಲ್ಲಿ ಹಝ್ರತ್ ಝುಬೈರ್ ಬಿನ್ ಅವಾಮ್ ರಝಿಯಲ್ಲಾಹು ಅನ್‌ಹು ಸಹ ಒಳಪಟ್ಟಿರುವರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಲ್ಲಿ ಮನೆಗಳಿಗೆ ಸೀಮೆಯನ್ನು ನಿಶ್ಚಯಿಸಿ ಗಡಿಯನ್ನು ಗುರುತು ಹಾಕುವಾಗ ಹಝ್ರತ್ ಝುಬೇರ್‌ರಿಗೆ ಭೂಮಿಯ ಒಂದು ದೊಡ್ಡ ಭಾಗವನ್ನು ನಿಶ್ಚಯಿಸಿದರು.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಒಬ್ಬ ಅನ್ಸಾರಿ ಸಹಾಬಿಯೊಂದಿಗೆ ನೀರಿನ ಕಾಲುವೆ ಅಥವಾ ನಾಲೆಯ ವಿಷಯದಲ್ಲಿ ಅವರಿಗೆ ಭಿನ್ನಾಭಿಪ್ರಾಯ ಉಂಟಾಯಿತು. ಅವರಿಬ್ಬರೂ ಅದರಿಂದ ತಮ್ಮ ತಮ್ಮ ಕೃಷಿ ಭೂಮಿಗೆ ನೀರು ಹಾಯಿಸುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತರ್ಕವನ್ನು ಕೊನೆಗೊಳಿಸಲು ಝುಬೇರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ಝುಬೇರ್, ನೀನು ನಿನ್ನ ಕೃಷಿ ಭೂಮಿಗೆ ನೀರೊದಗಿಸಿದ ನಂತರ ತನ್ನ ನೆರೆಕರೆಯವನಿಗೆ ಸಹ ನೀರನ್ನು ಬಿಟ್ಟುಕೊಡು. ಹಾಗಿದ್ದೂ ಆ ಅನ್ಸಾರಿಗೆ ಈ ತೀರ್ಮಾನ ಇಷ್ಟವಾಗಲಿಲ್ಲ. ಆ ಅನ್ಸಾರಿ ಹೇಳಿದ: ಯಾ ರಸೂಲುಲ್ಲಾಹ್, ಇವರು ನಿಮ್ಮ ಚಿಕ್ಕಮ್ಮನ ಮಗನಾಗಿರುವ ಕಾರಣ ನೀವು ಹೀಗೆ ತೀರ್ಮಾನ ಮಾಡಿದ್ದೀರಿ ತಾನೇ? ಹೀಗೆ ಹೇಳಿದಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಮುಖದ ಬಣ್ಣ ಬದಲಾಯಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝುಬೇರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ಇನ್ನು ನೀನು ನಿನ್ನ ಕೃಷಿ ಭೂಮಿಯ ದಿನ್ನೆಯ ತನಕ ನೀರು ತುಂಬುವ ವರೆಗೆ ನೀರನ್ನು ಬಿಟ್ಟು ಕೊಡಬೇಡ. ಹೀಗೆ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಸಿಕ್ಕಬೇಕಾಗಿದ್ದ ಪೂರ್ತಿ ಹಕ್ಕನ್ನು ಅವರಿಗೆ ನೀಡಿದರು. ಮೊದಲು ಅನ್ಸಾರಿ ಸಹಾಬಿಯ ಸೌಕರ್ಯಕ್ಕಾಗಿ ತೀರ್ಮಾನ ಮಾಡಲಾಗಿತ್ತು.

ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ:

فَلَا وَرَبِّكَ لَا يُؤْمِنُوْنَ حَتّٰى يُحَكِّمُوْكَ فِيْمَا شَجَرَ بَيْنَهُمْ ثُمَّ لَا يَجِدُوْا فِيْۤ اَنْفُسِهِمْ حَرَجًا مِّمَّا قَضَيْتَ وَيُسَلِّمُوْا تَسْلِيْمًا

ಎಂದರೆ, 'ಹಾಗಲ್ಲ, ನಿನ್ನ ಪ್ರಭುವಿನಾಣೆ, ಅವರ ಮಧ್ಯೆ ಭಿನ್ನಾಭಿಪ್ರಾಯವುಳ್ಳ ವಿಚಾರದಲ್ಲಿ ಅವರು ನಿನ್ನನ್ನು ತೀರ್ಪುಗಾರನನ್ನಾಗಿ ಸ್ವೀಕರಿಸಿ, ನೀನು ತೀರ್ಪು ನೀಡಿದ ವಿಚಾರದ ಕುರಿತು ಅವರ ಹೃದಯಗಳಲ್ಲಿ ಯಾವ ಅಸಮಾಧಾನವೂ ಉಂಟಾಗದೆ ಅವರು ಪೂರ್ಣವಾಗಿ ವಿಧೇಯತೆ ತೋರಿಸುವ ವರೆಗೆ ಅವರು (ಯಥಾರ್ಥ) ವಿಶ್ವಾಸಿಗಳಾಗಲಿಕ್ಕಿಲ್ಲ'

(ಅನ್ನಿಸಾಅ್:66) ಎಂಬ ಆಯತ್ ಇದೇ ಘಟನೆಗೆ ಸಂಬಂಧಿಸಿ ಅವತೀರ್ಣವಾಗಿತ್ತು ಎಂದು ನಾನು ನಿಶ್ಚಯವಾಗಿಯೂ ಭಾವಿಸುತ್ತೇನೆ.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ثُمَّ اِنَّكُمْ يَوْمَ الْقِيٰمَةِ عِنْدَ رَبِّكُمْ تَخْتَصِمُوْنَ – **ಸುಮ್ಮ ಇನ್ನಕುಮ್ ಯೌಮಲ್ ಖಿಯಾಮತಿ ಇಂದರಬ್ಬಿಕುಮ್ ತಖ್ತಸಿಮೂನ್** ಎಂದರೆ, ನೀವು ಖಿಯಾಮತ್ ದಿನದಂದು ಅಲ್ಲಾಹನ ಸನ್ನಿಧಿಯಲ್ಲಿ ಪರಸ್ಪರ ವಾದಿಸುವಿರಿ ಎಂಬ ಆಯತ್ ಅವತೀರ್ಣವಾದಾಗ ನಾನು ಕೇಳಿದೆ: ಯಾ ರಸೂಲುಲ್ಲಾಹ್, ಇದರಲ್ಲಿ ನಮ್ಮ ಲೌಕಿಕವಾದ ಜಗಳದ ಬಗ್ಗೆ ಸೂಚಿಸಲಾಗಿದೆಯೇ? ಆಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೌದು ಎಂದು ಹೇಳಿದರು. ಅನಂತರ ثُمَّ لَتُسْـَٔلُنَّ يَوْمَئِذٍ عَنِ النَّعِيْمِ ಮತ್ತೆ, ಖಂಡಿತವಾಗಿಯೂ ಅಂದು ನಿಮ್ಮೊಡನೆ (ಇಹಲೋಕದ) ಸುಖಗಳ ಬಗ್ಗೆ ಪ್ರಶ್ನಿಸಲಾಗುವುದು. ಎಂದರೆ 'ಆ ದಿನ ನಿಮಗೆ ಸಿಕ್ಕಿರುವ ಅನುಗ್ರಹಗಳ ಬಗ್ಗೆ ಪ್ರಶ್ನಿಸಲಾಗುವುದು' ಎಂಬ ಆಯತ್ ಅವತೀರ್ಣವಾದಾಗ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಕೇಳಿದರು: ಯಾ ರಸೂಲುಲ್ಲಾಹ್, ನಮ್ಮ ಬಳಿ ಖರ್ಜೂರ ಮತ್ತು ನೀರು ಮಾತ್ರವಿರುವಾಗ ನಮ್ಮೊಡನೆ ಯಾವ ಅನುಗ್ರಹದ ಬಗ್ಗೆ ಕೇಳಲಾಗುವುದು? ಆಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಕಿವಿಗೊಟ್ಟು ಕೇಳಿರಿ, ಈ ಅನುಗ್ರಹಗಳ ಕಾಲ ಸಹ ಸಮೀಪದಲ್ಲೇ ಬರುವುದು.

ಒಬ್ಬ ಹಿರಿಯರು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ನಾನು ಇಂದಿನ ವರೆಗೆ ಯಾರ ಶರೀರದಲ್ಲೂ ಕಾಣದಷ್ಟು ಗಾಯಗಳ ಗುರುತುಗಳನ್ನು ನಿಮ್ಮ ಶರೀರದಲ್ಲಿ ನಾನು ಕಂಡೆನು. ಅದಕ್ಕೆ ಉತ್ತರವಾಗಿ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಹೇಳಿದರು: ಅಲ್ಲಾಹನಾಣೆ, ಈ ಎಲ್ಲ ಗಾಯಗಳೂ ನನಗೆ ಅಲ್ಲಾಹನ ಮಾರ್ಗದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸೇರಿಕೊಂಡು ಯುದ್ಧ ಮಾಡುವುದರಿಂದ ಆಗಿದ್ದುವು.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಒಂದು ಸಾವಿರ ಸೇವಕರಿದ್ದರು. ಅವರು ಕೃಷಿ ಭೂಮಿಯಲ್ಲಿ ಕೆಲಸ ಮಾಡಿ ಅದರ ಬೆಳೆಯನ್ನು ತರುತ್ತಿದ್ದರು. ಆದರೆ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಅವುಗಳನ್ನು ಮನೆಗೆ ತರದೆ, ಪೂರ್ತಿಯಾಗಿ ದಾನ ಮಾಡುತ್ತಿದ್ದರು. ಝುಬೇರ್ ರಝಿಯಲ್ಲಾಹು ಅನ್‌ಹು ದೀನಿನ ಸ್ತಂಭಗಳಲ್ಲಿ ಒಂದು ಸ್ತಂಭವಾಗಿರುವರು ಎಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಝುಬೇರ್, ಎಂದರೆ ನನ್ನ ತಂದೆ ಜಮಲ್ ಯುದ್ಧ ದಿವಸ ನನ್ನನ್ನು ಕರೆದರು. ನಾನು ಅವರ ಬಳಿ ನಿಂತೆ. ಅವರು ಹೇಳಿದರು: ಹೇ ನನ್ನ ಪ್ರಿಯ ಮಗನೇ, ಇಂದು ನಾನು ದೌರ್ಜನ್ಯ ಪೀಡಿತನ ಸ್ಥಿತಿಯಲ್ಲಿ ಶಹೀದ್ ಆಗುವೆನು ಎಂದು ನನಗೆ ಅನಿಸುತ್ತಿದೆ. ನನಗೆ ಅತಿ ಹೆಚ್ಚಿನ ಚಿಂತೆ ನನ್ನ ಸಾಲಗಳ ಬಗ್ಗೆಯಾಗಿದೆ. ಅನಂತರ ಹೇಳಿದರು: ಹೇ ನನ್ನ ಮಗನೇ, ನನ್ನ ಸೊತ್ತನ್ನು ಮಾರಾಟ ಮಾಡಿ ನನ್ನ ಸಾಲಗಳನ್ನು ಸಂದಾಯ ಮಾಡು. ಮೂರನೇ ಒಂದು ಭಾಗವನ್ನು ನಾನು ವಸಿಯ್ಯತ್ ಮಾಡುತ್ತೇನೆ. ಸಾಲಗಳನ್ನು ಸಂದಾಯ ಮಾಡಿದ ನಂತರ ಏನಾದರೂ ಬಾಕಿಯಾದರೆ, ಅದರಿಂದ ಮೂರನೇ ಒಂದು ಭಾಗ ನಿನ್ನ ಮಕ್ಕಳಿಗೂ ನೀಡು. ನನ್ನ ಸಾಲಗಳನ್ನು ಸಂದಾಯ ಮಾಡಲು ಅಸಾಧ್ಯವಾಗುವ ಸ್ಥಿತಿ ಬಂದರೆ, ನನ್ನ ಮೌಲಾನಿಂದ ಸಹಾಯ ಪಡೆ. ಮೌಲಾ ಎಂಬುದರಿಂದ ನನ್ನ ತಂದೆಯವರು ಯಾರನ್ನು ಉದ್ದೇಶಿಸಿದ್ದರು ಎಂದು ಗೊತ್ತಾಗದ ಕಾರಣ ನಾನು ತಮ್ಮ ಮೌಲಾ ಯಾರೆಂದು ಕೇಳಿದೆ. ಆಗ ಹಝ್ರತ್ ಝುಬೇರ್ ಹೇಳಿದರು: ಅಲ್ಲಾಹ್. ಅನಂತರ ಯಾವಾಗಲೆಲ್ಲ ಸಾಲ ಸಂದಾಯ ಮಾಡಲು ಸಾಧ್ಯವಾಗದೆ ಸಂಕಷ್ಟದಲ್ಲಿ ಸಿಲುಕುವ ಸ್ಥಿತಿ ಬರುವಾಗಲೆಲ್ಲ ನಾನು ಹೀಗೆ ಹೇಳುತ್ತಿದ್ದೆ, ಹೇ ಝುಬೇರನ ಮೌಲಾ, ಸಾಲದ ಸಂದಾಯವನ್ನು ಸುಲಭ ಗೊಳಿಸು. ಆಗ ಅವನು ಅದನ್ನು ಸಂದಾಯ ಮಾಡಿಸುತ್ತಿದ್ದನು. ಎಂದರೆ, ಸಾಲ ಸಂದಾಯ ಮಾಡಲಿಕ್ಕಾಗಿ ಏನಾದರೂ ಏರ್ಪಾಡು ಅಲ್ಲಾಹನು ಮಾಡಿಸುತ್ತಿದ್ದನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಖಿಲಾಫತಿನ ಚುನಾವಣೆಯ ಸ್ಥಿತಿಗತಿಗಳ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಶಹಾದತಿನ ಘಟನೆ ನಡೆದಾಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಬೈಅತ್ ಸ್ವೀಕರಿಸಲು ಒತ್ತಾಯ ಪಡಿಸಲಾಯಿತು. ಹಲವು ಬಾರಿ ನಿರಾಕರಿಸಿದ ನಂತರ ಕೊನೆಗೆ ಅವರು ಆ ಜವಾಬ್ದಾರಿಯನ್ನು ಹೊರಲು ತಯಾರಾದರು. ಜನರಿಂದ ಬೈಅತ್ ಸ್ವೀಕರಿಸಲು ಶುರುಮಾಡಿದರು. ಕೆಲವು ಪ್ರಮುಖ ಸಹಾಬಿವರ್ಯರು ಆಗ ಮದೀನದಿಂದ ಹೊರಗಿದ್ದರು. ಹಝ್ರತ್ ತಲ್‌ಹ ಮತ್ತು ಹಝ್ರತ್ ಝುಬೇರ್ ಬಗ್ಗೆ ವರದಿಯಾಗಿರುವುದೇನೆಂದರೆ, ಅವರ ಬಳಿಗೆ ಹಕೀಂ ಬಿನ್ ಜಬ್ಲ ಮತ್ತು ಮಾಲಿಕ್ ಬಿನ್ ಉಶ್ತರ್‌ರನ್ನು ಕೆಲವು ಜನರೊಂದಿಗೆ ಕಳುಹಿಸಲಾಯಿತು. ಅವರು ಅವರಿಬ್ಬರ ಮುಂದೆ ನಿಂತು ಖಡ್ಗವನ್ನು ತೋರಿಸಿ ಹೇಳಿದರು: ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಕೈಯಲ್ಲಿ ಬೈಅತ್ ಮಾಡುವುದಾದರೆ ಮಾಡಿರಿ, ಇಲ್ಲದಿದ್ದರೆ ನಾವು ನಿಮ್ಮನ್ನು ವಧಿಸುವೆವು. ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಕೊಲೆಗಾರರಿಂದ ಪ್ರತಿಕಾರ ಮಾಡಬೇಕು ಎಂಬ ಶರತ್ತಿನೊಂದಿಗೆ ಅವರು ಹಝ್ರತ್ ಅಲಿಯವರಿಗೆ ಬೈಅತ್ ಮಾಡಲು ಒಪ್ಪಿದರು. ಆದರೆ ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಕೊಲೆಗಾರರನ್ನು ಬೇಗನೆ ಶಿಕ್ಷಿಸುವುದನ್ನು ಕಾಣದಿರುವಾಗ ಅವರು ಬೈಅತಿನಿಂದ ಹಿಂಜರಿದು ಮದೀನದಿಂದ ಮಕ್ಕಕ್ಕೆ ಹೋದರು. ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಕೊಲೆಯಲ್ಲಿ ಭಾಗಿಯಾಗಿದ್ದ ಕಲಹಗಾರರ ಒಂದು ಸಂಘ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ಬಳಿಗೆ ಹೋಗಿ, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ರಕ್ತದ ಪ್ರತಿಕಾರ ಮಾಡಲು ಜಿಹಾದ್ ಮಾಡಬೇಕೆಂದು ಹೇಳಿದರು. ಹಝ್ರತ್ ತಲ್‌ಹ ಮತ್ತು ಹಝ್ರತ್ ಝುಬೇರ್ ಸಹ ಅವರೊಂದಿಗೆ ಸೇರಿಕೊಂಡರು. ಇದರ ಪರಿಣಾಮವಾಗಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ವಿರುದ್ಧ ಹಝ್ರತ್ ಆಯಿಶಾ, ಹಝ್ರತ್ ತಲ್‌ಹ ಮತ್ತು ಹಝ್ರತ್ ಝುಬೇರ್‌ರಿಂದ ಯುದ್ಧ ನಡೆಯಿತು. ಅದನ್ನು ಜಮಲ್ ಯುದ್ಧವೆಂದು ಕರೆಯಲಾಗುತ್ತದೆ. ಈ ಯುದ್ಧ ಆರಂಭವಾಗುವಾಗಲೇ, ಹಝ್ರತ್ ಅಲಿಯವರ ನಾಲಗೆಯಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು

ಭವಿಷ್ಯವಾಣಿ ಕೇಳಿ ಹಝ್ರತ್ ಝುಬೇರ್ ಯುದ್ಧದಿಂದ ಬಿಟ್ಟು ನಿಂತರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದ್ದರು: ನೀನು ಹಝ್ರತ್ ಅಲಿಯೊಂದಿಗೆ ಯುದ್ಧ ಮಾಡುವಿ, ಅತಿರೇಕ ನಿನ್ನ ಕಡೆಯಿಂದ ಆಗಿರುವುದು. ಹಾಗೆ ಹಝ್ರತ್ ಝುಬೇರ್ ತಾನು ಅಲಿಯವರ ವಿರುದ್ಧ ಯುದ್ಧ ಮಾಡಲಾರೆನೆಂದು ಶಪಥ ಮಾಡಿದರು. ಇನ್ನೊಂದು ಕಡೆ ಹಝ್ರತ್ ತಲ್‌ಹ ತನ್ನ ಮರಣಕ್ಕೆ ಮುಂಚೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಕೈಯಲ್ಲಿ ಬೈಅತ್ ಮಾಡುವುದನ್ನು ಸಮ್ಮತಿಸಿದ್ದರು.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಮದೀನದ ಕಡೆಗೆ ಮರಳುವ ಉದ್ದೇಶದಿಂದ ಹೊರಟಾಗ ಉಮೇರ್ ಬಿನ್ ಜರ್‌ಮೂಝ್ ಕುದುರೆ ಮೇಲೆ ಸವಾರನಾಗಿ ಹಿಂದಿನಿಂದ ಬಂದು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಮೇಲೆ ಈಟಿಯಿಂದ ಹಲ್ಲೆ ಮಾಡಿ ಹಗುರವಾಗಿ ಗಾಯಗೊಳಿಸಿದನು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಸಹ ಅವನ ಮೇಲೆ ಹಲ್ಲೆ ಮಾಡಿದರು. ತಾನು ಕೊಲ್ಲಲ್ಪಡುವೆನು ಎಂದು ಇಬ್ನು ಜರ್‌ಮೂಝ್‌ಗೆ ಭಯವಾದಾಗ ಅವನು ತನ್ನ ಸಂಗಡಿಗರನ್ನು ಜೋರಾಗಿ ಕರೆದನು. ಅವರೆಲ್ಲ ಸೇರಿಕೊಂಡು ಹಲ್ಲೆ ನಡೆಸಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಶಹೀದ್ ಮಾಡಿದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಶಹೀದ್ ಮಾಡಿದ ನಂತರ ಇಬ್ನು ಜರ್‌ಮೂಝ್ ಹಝ್ರತ್ ಅಲಿಯವರ ಬಳಿಗೆ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ತಲೆ ಮತ್ತು ಅವರ ಖಡ್ಗವನ್ನು ತಂದನು. ಇಬ್ನು ಜರ್‌ಮೂಝ್ ಒಳಗೆ ಬರಲು ಅನುಮತಿ ಕೇಳಿದನು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಕೊಲೆಗಾರನಾದ ಇಬ್ನು ಸಫಿಯಾ ನರಕದಲ್ಲಿ ಪ್ರವೇಶಿಸಲಿ.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಸಿವಾ ಎಂಬ ಕಣಿವೆಯಲ್ಲಿ ದಫನ್ ಮಾಡಲಾಯಿತು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಇಬ್ನು ಜರ್‌ಮೂಝ್ ಬಂದು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಒಳಗೆ ಬರಲು ಅನುಮತಿ ಕೇಳಿದಾಗ, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಅವನಿಂದ ದೂರವಿರಲು ಬಯಸಿದರು. ಆಗ ಅವನು ಹೇಳಿದನು: ಏನು, ಝುಬೇರ್ ವಿಪತ್ತುಗಾರರಲ್ಲಿ ಒಳಪಟ್ಟವರಾಗಿರಲಿಲ್ಲವೇ? ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: ನಿನ್ನ ಮುಖ ಮಣ್ಣು ಪಾಲಾಗಲಿ, وَنَزَعۡنَا مَا فِىۡ صُدُوۡرِهِمۡ مِّنۡ غِلٍّ اِخۡوَانًا عَلٰى سُرُرٍ مُّتَقٰبِلِيۡنَ – ಅವರ ಹೃದಯಗಳಲ್ಲಿರುವ ಯಾವುದೇ ಹಗೆ ದ್ವೇಷವನ್ನೂ ನಾವು ನೀಗಿಸುವೆವು. ಹಾಗೆ ಅವರು ಪರಸ್ಪರ ಸಹೋದರರಂತೆ ಆರಾಮಾಸನಗಳಲ್ಲಿ ಅಭಿಮುಖವಾಗಿ ಕುಳಿತುಕೊಳ್ಳುವರು. (ಅಲ್‌ಹಿಜ್‌ರ್: 48) ಎಂಬ ಆಯತಿನಲ್ಲಿ ಅಲ್ಲಾಹನು ಹೇಳಿದ ಜನರಲ್ಲಿ ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಒಳಪಟ್ಟಿರುವರು ಎಂದು ನಾನು ಭಾವಿಸುತ್ತೇನೆ.

(ಖುತ್‌ಬದ ಕೊನೆಯಲ್ಲಿ ಹುಝೂರ್ ಅಲ್ ಹಾಜೀ ಇಬ್ರಾಹೀಂ ಮುಬಾಈ ಸಾಹಿಬ್ ನಾಇಬ್ ಅಮೀರ್ ಗ್ಯಾಂಬಿಯಾ, ದಿವಂಗತ ನಯೀಮ್ ಅಹ್ಮದ್ ಖಾನ್ ಸಾಹಿಬ್ ನಾಇಬ್ ಅಮೀರ್ ಕರಾಚಿ ಮತ್ತು ಬುಶ್ರಾ ಬೇಗಂ ಸಾಹಿಬ ಆಫ್ ಜರ್ಮನಿಯ ಸ್ವಭಾವ ವೈಶಿಷ್ಟ್ಯಗಳನ್ನು ವಿವರಿಸಿದರು ಮತ್ತು ಜುಮುಅ ನಮಾಝ್ ನಂತರ ಅವರ ಜನಾಝ ನಮಾಝನ್ನು ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 04-09-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**:* *khutuba.kannada@gmail.com*



**You can find all the Sermons archived at**: www.alislam.org/friday-sermon